# <u>ಮಹಿಮೆ ಮಹಿಮೆ ಸದಾ ಆತನಿಗೆ</u>

ಮಹಿಮೆ ಮಹಿಮೆ ಸದಾ ಆತನಿಗೆ
ಯೇಸು ರಾಜನಿಗೆಂದಿಗಾಗಲಿ
ರಕ್ಷಣಾನಂದವ ನೀಡಿದ ಕರ್ತನ
ಎಂದೆಂದೂ ಹಾಡಿ ಕೊಂಡಾಡುವೆ

ಆ....ಆ..... ಆನಂದವೇ ಪರಮಾನಂದವೇ
ಸ್ವರ್ಗದಾನಂದವೇ ಎಂದಿಗೂ
ಅತಿ ಘೋರವಾದ ಪಾಪದ ಬಂಧದಿ
ನನ್ನನೆಂದಿಗೂ ಬಿಡಿಸಿದನು

ಕುರುಡನಾಗಿದ್ದೆ ಕರುಣೇ ತೋರಿದಿ
ಪರಮ ದೃಷ್ಟಿಯ ನೀಡಿದಿ
ಕರುಣಾ ಸಾಗರ ಪಾಪಿಯ ರಕ್ಷಿಸ
ಧರೆಗಿಳಿದು ನೀ ಬಂದವನೇ

ಜೀವ ಮಾರ್ಗದೊಳು ಹೋಗುವೆ ಹೋಗುವೆ
ಯೇಸು ರಾಜನ ಹಿಂದೆ ಹೋಗುವೆ
ಭಾಗ್ಯ ಕಾನಾನಿಗೆ ಸೇರುವವರೆಗೆ
ಸದಾ ಆತನ ಹಿಂದೆ ಹೋಗುವೆ